# ಚಿಕ್ಕಮಗಳೂರಿನಲ್ಲಿ ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಸಂಘಗಳ ಪಾತ್ರ

**ಪ್ರಭಾ ಹೆಚ್.ಎಂ.**

ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ.

**DOI: https://doi.org/10.5281/zenodo.18849673**

## ABSTRACT:

ಆರ್ಥಿಕ ಅಸಮಾನತೆಯಿಂದ ಕೂಡಿದ ನಮ್ಮ ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಮಹಿಳಾ ಶೋಷಣೆಯು ಯಾವುದೇ ಒಬ್ಬ ವ್ಯಕ್ತಿಯ ಉದ್ದೇಶಿತ ಕ್ರಿಯೆಯಾಗಿರದೆ ಬಂಡವಾಳಶಾಹಿ ವ್ಯವಸ್ಥೆಯ ದ್ಯೋತಕಗಳಾದ ರಾಜಕೀಯ, ಆರ್ಥಿಕ, ಹಾಗೂ ಸಾಮಾಜಿಕ ರಚನೆಗಳಿಂದ ಸೃಷ್ಟಿಯಾದಂತಹ ಒಂದು ವ್ಯವಸ್ಥೆ. ಈ ವ್ಯವಸ್ಥೆಯನ್ನು ಹೋಗಲಾಡಿಸಿ ಮಹಿಳೆಯರು ಆರ್ಥಿಕ ಸಬಲೀಕರಣದತ್ತ ಮುನ್ನಡೆಯಬೇಕು. ಪ್ರತಿಯೊಬ್ಬ ಮಹಿಳೆಯಲ್ಲೂ ಸುಪ್ತವಾಗಿರುವ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸಾಮರ್ಥ್ಯ ಅತ್ಯದ್ಭುತವಾದುದು. ಮಹಿಳೆಯಿಲ್ಲದ ಮನೆ, ಸಮಾಜ, ದೇಶ ಅಷ್ಟೇ ಏಕೆ ಮಾನವನ ಅಸ್ತಿತ್ವವೂ ಸಹ ಕುಸಿದುಬೀಳುತ್ತದೆ. ಮಹಿಳೆ ಮಾಡಲಾಗದ ಕೆಲಸ ಈ ಭೂಮಿಯಲ್ಲೇ ಇಲ್ಲ. ಆದ್ದರಿಂದ ಈ ಸುಪ್ತ ಶಕ್ತಿಯನ್ನು ಬಡಿದೆಬ್ಬಿಸಿ ಚಲನಾತ್ಮಕ ಶಕ್ತಿಯಾಗಿ ಪರಿವರ್ತನೆ ಮಾಡಿದಾಗ ಮಹಿಳೆಯ ಜೀವನ ಮತ್ತು ಮಾನವ ಕುಲದ ಬದುಕು ಅರ್ಥಪೂರ್ಣವಾಗುತ್ತದೆ. ಈ ಪತ್ರಿಕೆಯಲ್ಲಿ ಚಿಕ್ಕಮಗಳೂರಿನಲ್ಲಿ ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಸಂಘಗಳ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ.

## KEYWORDS:

ಸ್ವಸಹಾಯ ಸಂಘ, ಮಹಿಳಾ ಸಬಲೀಕರಣ, ಚಿಕ್ಕಮಗಳೂರು ಜಿಲ್ಲೆ, ಸ್ಥಳೀಯ ಸರ್ಕಾರಗಳಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ.

**ಪೀಠಿಕೆ:**

ಮಹಿಳೆಯರು ಆರ್ಥಿಕ ಸಬಲೀಕರಣದತ್ತ ಮುನ್ನಡೆಯಬೇಕಾದರೆ ಮೊದಲು ಅವರು ಸಂಘಟಿತರಾಗುವುದು ಅಗತ್ಯ. ಈ ಹಿನ್ನೆಲೆಯಲ್ಲಿ ನಬಾರ್ಡ್ ಸ್ವಸಹಾಯ ಸಂಘಗಳ ರಚನೆಗೆ ಹೆಚ್ಚು ಒತ್ತುಕೊಟ್ಟಿದೆ. ಇದರ ಉದ್ದೇಶ ಕೇವಲ ಸಬಲೀಕರಣ ಮಾತ್ರವಾಗಿರದೇ ದೇಶದ ಬಡತನ ನಿವಾರಣೆಗೆ ಪರ್ಯಾಯ ಮಾರ್ಗಗಳಲ್ಲಿ ಇದು ಒಂದಾಗಿದೆ. ಆರ್ಥಿಕ ಸಂಪತ್ತಿನ ಹಿಡಿತ ಪುರುಷರ ಕೈವಶದಲ್ಲಿರುವುದರಿಂದಲೇ ಮಹಿಳೆಯರು ಶೋಷಣೆಗೆ ಒಳಪಡುವರು ಹಾಗೂ ಅಧೀನತೆಯಿಂದ ಕೆಲಸ ಮಾಡಬೇಕಾದ ಪರಿಸ್ಥಿತಿ ಅನಿವಾರ್ಯವಾಗಿ ಒದಗಿ ಬರುವುದು. ಇಂತಹ ಅಧೀನತೆಗೆ ಮಂಗಳ ಹಾಡಬೇಕಾದರೆ ಮಹಿಳೆಯರು ಸಂಘಟಿತರಾಗಿ, ಆರ್ಥಿಕ ಸಂಪತ್ತನ್ನು ಹೊಂದಬೇಕಾದ್ದು ತುರ್ತು ಅಗತ್ಯ. ಸ್ವಸಹಾಯ ಸಂಘಗಳು ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡುವುದಲ್ಲದೆ ಉಳಿತಾಯ ಮನೋಭಾವನೆಯನ್ನು ಹೆಚ್ಚಿಸುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣ ಹಾಗೂ ಅವರನ್ನು ಸ್ವಾವಲಂಬಿಗಳನ್ನಾಗಿಸುವ ಮುಖ್ಯ ಗುರಿಯೊಂದಿಗೆ 2000–01ನೇ ಸಾಲಿನಲ್ಲಿ ಜಾರಿಗೊಂಡಿದ್ದೇ ಸ್ತ್ರೀಶಕ್ತಿಯ ಯೋಜನೆ, ಮಹಿಳೆಯರು ಆರ್ಥಿಕ ಪ್ರಗತಿ ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣ ಮೂಡಿಸುವಂತಹ ಪ್ರಕ್ರಿಯೆಯನ್ನು ಬಲಪಡಿಸುವುದು, ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸುವುದರ ಮೂಲಕ ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಅವರಲ್ಲಿ ಆರ್ಥಿಕ ಸ್ಥಿರತೆ ಮೂಡಿಸುವುದು, ಸಾಲ ನೀಡುವಂತಹ ಸಂಸ್ಥೆಗಳಿಗೆ ಸಾಮೀಪ್ಯ ಒದಗಿಸುವುದು ಹಾಗೂ ನಾನಾ ಅಭಿವೃದ್ಧಿ ಇಲಾಖೆಗಳ ಸೇವೆಯನ್ನು ಈ ಗುಂಪುಗಳ ಸದಸ್ಯರಿಗೆ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶ.

ಸ್ವ–ಸಹಾಯ ಗುಂಪುಗಳು ಸಮಾನ ಮನಸ್ಕರಾದ, ಸಮಾನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳ ಮತ್ತು ವ್ಯಾಪಕವಾಗಿ ಸಮಾನ ಉದ್ದೇಶಗಳನ್ನು ಹೊಂದಿರುವ ಜನರ ಗುಂಪುಗಳಾಗಿರುತ್ತವೆ. ಅವು ಇದುವರೆಗೆ ತಲುಪಲಾಗದಿರುವ ಜನರಿಗೆ ಸಾಲಸೌಲಭ್ಯಗಳನ್ನು, ಹಣಕಾಸಿನ ನೆರವನ್ನು ಮತ್ತು ಕಿರು ಉದ್ಯಮದ ಸೇವೆಗಳನ್ನು ಸಮರ್ಪಕವಾಗಿ ತಲುಪಿಸುವ ವೇದಿಕೆಗಳಾಗಿವೆ.

**ನಬಾರ್ಡ್‌ರವರ ಪ್ರಕಾರ:** ಇದು 20 ಜನ ಸದಸ್ಯರ ಗುಂಪು ಈ ಗುಂಪಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆ ನಡೆಯುತ್ತಿದ್ದು ಇದರ ಉದ್ದೇಶ ಉಳಿತಾಯವಾಗಿದೆ.

**ಸ್ವ–ಸಹಾಯ ಸಂಘಗಳ ಐತಿಹಾಸಿಕ ಹಿನ್ನೆಲೆ**

ನೊಬೆಲ್ ಪ್ರಶಸ್ತಿ ವಿಜೇತ ಮಹಮ್ಮದ್ ಯೂನಸ್ ಬಾಂಗ್ಲಾದೇಶದಲ್ಲಿ ಬಡವರಿಗೆ ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ಹಣಕಾಸಿನ ಸೇವೆಗಳನ್ನು ಒದಗಿಸುವ ಮೂಲಕ ಖ್ಯಾತಿಯನ್ನು ಪಡೆದಿದ್ದಾರೆ.

1970ರ ದಶಕದ ಕೊನೆಯ ಭಾಗದಲ್ಲಿ ಭಾರತದ ಗುಜರಾತ್ ರಾಜ್ಯದಲ್ಲಿ ಹೂವು ಮತ್ತು ತರಕಾರಿಗಳನ್ನು ಮಾರುವ ಅತಿ ಸಣ್ಣ ವ್ಯಾಪಾರದಾರರು ತಮ್ಮ ಅನುಕೂಲಕ್ಕಾಗಿ ಸ್ವ–ಸಹಾಯ ಗುಂಪುಗಳನ್ನು ರಚಿಸಿಕೊಳ್ಳತೊಡಗಿದ್ದರು. ಆರ್ಥಿಕವಾಗಿ ತೀರಾ ದುರ್ಬಲರಾಗಿ ಈ ಜನರು ತಮ್ಮ ಬದುಕಿಗಾಗಿ ಹೂವು ಮತ್ತು ತರಕಾರಿಗಳನ್ನು ವ್ಯಾಪಾರವನ್ನು ಅವಲಂಬಿಸಿದ್ದರು. ಮಾರಾಟಕ್ಕಾಗಿ ಈ ವಸ್ತುಗಳನ್ನು ಖರೀದಿಸಲು ಅವರು ಸಂಜೆಯ

ವೇಳೆಗೆ 10 ರೂಪಾಯಿ ಬಡ್ಡಿಯನ್ನು ಸೇರಿಸಿ 100 ರೂಪಾಯಿಗಳನ್ನು ಮರುಪಾವತಿಸಬೇಕಾದಂತಹ ದಾರುಣ ಸ್ಥಿತಿ ಇತ್ತು ಇಂತಹ ದುಸ್ಥಿತಿಯಲ್ಲಿದ್ದ ಜನರು ಶೋಷಣೆಯನ್ನು ತಪ್ಪಿಸಲು ಸ್ವ-ಸಹಾಯ ಗುಂಪುಗಳು ಅಪೂರ್ವ ವೇದಿಕೆಯಾಗಿ ಪರಿಣಮಿಸಿದ್ದವು.

ಭಾರತದಲ್ಲಿ ಕಳೆದ 35 ವರ್ಷಗಳಿಂದೀಚೆಗೆ ಬ್ಯಾಂಕ್ ಉದ್ಯಮ ಜಾಲವು ಗಮನಾರ್ಹವಾಗಿ ಮತ್ತು ಶೀಘ್ರಗತಿಯಲ್ಲಿ ವಿಸ್ತರಿಸಿದ್ದರೂ ಸಹ ಜನರು ಸಾಲಕ್ಕಾಗಿ ಹಣದ ಲೇವಾದೇವಿಗಾರರನ್ನು ಅವಲಂಬಿಸಿದ್ದರು. ಇದರಿಂದ ಬಡಜನರು ಸುಲಭವಾಗಿ ಸಾಲಸಿಗದೇ ಕಂಗಾಲಾಗಿದ್ದರು. ಇಂತಹ ಸಂದರ್ಭದಲ್ಲಿ 1980ರಲ್ಲಿ ಸ್ಥಾಪನೆಯಾದ ರಾಷ್ಟ್ರೀಯ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಬಾರ್ಡ್ ಹೊಸ ಅಧ್ಯಯನಗಳನ್ನು ನಡೆಸಿ ಕೆಲವೊಂದು ಉದ್ದೇಶಗಳನ್ನು ಹಾಕಿಕೊಂಡಿತು.

ಇದು ಸ್ವ-ಸಹಾಯ ಗುಂಪು ಮತ್ತು ಬ್ಯಾಂಕ್ ಜೋಡಣೆಯ ಮಾರ್ಗವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಲಾಯಿತು. 1 ಈ ಕಾರ್ಯತಂತ್ರವು ಬಡಜನರು ಸ್ವಸಹಾಯ ಸಂಘಗಳನ್ನು ರಚಿಸುವ ತಮ್ಮ ಉಳಿತಾಯಗಳನ್ನು ಒಂದೆಡೆ ಸಂಗ್ರಹಿಸುವಂತೆ ಅವರನ್ನು ಪ್ರೋತ್ಸಾಹಿಸುವ ಈ ಉಳಿತಾಯ ಸ್ವ-ಸಹಾಯ ಗುಂಪುಗಳಿಗೆ ಸ್ವ-ಸಹಾಯ ಸಂಘಗಳ ಸದಸ್ಯರಾದ ಬಡಜನರಿಗೆ ಸಾಲ ಮಾತ್ರವಲ್ಲದೆ, ಹಣಕಾಸಿನ ಸೇವೆಗಳನ್ನು ಒದಗಿಸುವಂತಹ ಏರ್ಪಾಡು ಅಸ್ತಿತ್ವಕ್ಕೆ ಬಂದಿತ್ತು.

**ಅಧ್ಯಯನದ ಉದ್ದೇಶಗಳು**

1. ಸ್ವಸಹಾಯ ಸಂಘಗಳ ಕಾರ್ಯಾಚರಣೆಯ ಬಗ್ಗೆ ಅವಲೋಕಿಸುವುದು
2. ಮಹಿಳಾ ಸಬಲೀಕರಣದಲ್ಲಿ ಸ್ವ-ಸಹಾಯ ಸಂಘಗಳ ಪಾತ್ರವನ್ನು ಮೌಲ್ಯೀಕರಿಸುವುದು.
3. ಚಿಕ್ಕಮಗಳೂರು ಜಿಲ್ಲೆಯಲ್ಲಿನ ಸ್ವ-ಸಹಾಯ ಸಂಘಗಳ ಪಾತ್ರ ಮತ್ತು ಅವುಗಳ ಬೆಳವಣಿಗೆಯಿಂದ ಮಹಿಳಾ ಸಬಲೀಕರಣದ ಸಾಧ್ಯತೆಯನ್ನು ಪರೀಕ್ಷಿಸುವುದು.

**ಸಂಶೋಧನಾ ಮಾದರಿ ಹಾಗೂ ವಿಧಾನ:**

ಪ್ರಸ್ತುತ ಸಂಶೋಧನೆ ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶಗಳನ್ನೊಳಗೊಂಡಿದೆ. ಈ ಅಧ್ಯಯನದ ವಿಷಯದ ಉದ್ದೇಶಗಳಿಗೆ ಸಂಬಂಧಿಸಿದಂತೆ ದತ್ತಾಂಶವನ್ನು ವಿವಿಧ ಮೂಲಗಳಿಂದ ಸಂಗ್ರಹಣೆ ಮಾಡಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಸ್ವಸಹಾಯ ಸಂಘಗಳ ಸಂಪೂರ್ಣ ಮಾಹಿತಿ ಸಂಗ್ರಹಿಸಿ, ಮಹಿಳೆಯರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಚರ್ಚಿಸಲಾಗಿದೆ.

**ಚಿಕ್ಕಮಗಳೂರು ಜಿಲ್ಲೆ ಸ್ಥಳೀಯ ಸರ್ಕಾರಗಳಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ**

ಚಿಕ್ಕಮಗಳೂರು ಜಿಲ್ಲೆಯು ಕರ್ನಾಟಕದ ನೈರುತ್ಯ ಭಾಗದಲ್ಲಿದೆ. ಈ ಜಿಲ್ಲೆಯ ಬಹು ಭಾಗವು ಮಲೆನಾಡಿನಿಂದ ಕೂಡಿದೆ. ಈ ಜಿಲ್ಲೆಯು ಪಶ್ಚಿಮಘಟ್ಟಗಳಿಂದ ಕೂಡಿದ್ದು ಮುಳ್ಳಯ್ಯನಗಿರಿ ಕರ್ನಾಟಕದ ಅತ್ಯಂತ ಎತ್ತರದ ಶಿಖರವಾಗಿದ್ದು 1926 ಮೀಟರ್ ಸಮುದ್ರಮಟ್ಟಕ್ಕಿಂತ ಎತ್ತರವಾಗಿದೆ. 1947ರವರೆಗೆ ಈ ಜಿಲ್ಲೆಯು ಕಡೂರು ಜಿಲ್ಲೆಯಾಗಿತ್ತು. ನಂತರ ಇದನ್ನು ಚಿಕ್ಕಮಗಳೂರು ಎಂದು ಕರೆಯಲಾಗುತ್ತದೆ. ಚಿಕ್ಕಮಗಳೂರು ಎಂಬ ಹೆಸರು ಬರಲು ಕಾರಣವೆಂದರೆ ದಂತಕತೆಗಳ ಪ್ರಕಾರ ಸಖರಾಯಪಟ್ಟಣದ ರಾಜ ರುಕ್ಮಾಂಗದ ಎಂಬುವನು ತನ್ನ ಕಿರಿಯಮಗಳನ್ನು ಮದುವೆ ಮಾಡುವಾಗ ವರದಕ್ಷಿಣೆಯಾಗಿ ಈ ಊರನ್ನು

ನೀಡಿದ ಹಾಗಾಗಿ ಚಿಕ್ಕಮಗಳೂರೆಂದು ಕರೆಯಲಾಗುತ್ತದೆ.

2011ರ ಜನಗಣತಿಯ ಪ್ರಕಾರ ಈ ಜಿಲ್ಲೆಯು ಒಟ್ಟು ಜನಸಂಖ್ಯೆ 11,37,961 ಇದರಲ್ಲಿ ಪುರುಷರ ಸಂಖ್ಯೆ 5,66,622 ಮಹಿಳೆಯರ ಸಂಖ್ಯೆ 5,71,339 ಲಿಂಗಾನುಪಾತ 1000ಕ್ಕೆ 1005 ಜನಸಾಂದ್ರತೆ ಪ್ರತಿ ಚ.ಕಿ.ಮೀ 158. ಸಾಕ್ಷರತೆ ಪ್ರಮಾಣ 2011 ರ ಜನಗಣತಿಯ ಪ್ರಕಾರ ಒಟ್ಟು 79.25% ಇದರಲ್ಲಿ ಪುರುಷರ ಸಾಕ್ಷರತೆ ಪ್ರಕಾರ 85.41% ಮಹಿಳೆಯರ ಸಾಕ್ಷರತೆ ಪ್ರಮಾಣ 73.16% ಭೂವಿಸ್ತೀರ್ಣ 7.201 ಚ.ಮೈ. ಚಿಕ್ಕಮಗಳೂರು ಜಿಲ್ಲೆಯು 1978ರಲ್ಲಿ ದೇಶದ ಗಮನವನ್ನು ಸೆಳೆದಿತ್ತು ಕಾರಣವೆಂದರೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಈ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾಗಿದ್ದರು.

**ಚಿಕ್ಕಮಗಳೂರು ತಾಲ್ಲೂಕಿನ ಮಹಿಳಾ ಸ್ವಸಹಾಯ ಗುಂಪುಗಳ ಮಾಹಿತಿ**

| ತಾಲ್ಲೂಕು ಹೆಸರು | ಒಟ್ಟು ಗುಂಪುಗಳ ಸಂಖ್ಯೆ | ರಚನೆಯಾದ ಗಂಪಪುಗಳಲ್ಲಿ ಇರುವ ಒಟ್ಟು ಸದಸ್ಯರ ಸಂಖ್ಯೆ | | | | | ಸಂಪೂರ್ಣ ಎಸ್ಸಿ ಎಸ್ಟಿ ಅಲ್ಪ ಸಂಖ್ಯಾತರ ಇತರ ಸದಸ್ಯರನ್ನು ಹೊಂದಿರುವ ಸ್ವ ಸಹಾಯ ಗುಂಪುಗಳು | | | | |
|---|---|---|---|---|---|---|---|---|---|---|---|
| | | ಎಸ್ಸಿ | ಎಸ್ಟಿ | ಅಲ್ಪ | ಇತರೆ | ಒಟ್ಟು | ಎಸ್ಸಿ | ಎಸ್ಟಿ | ಅಲ್ಪ | ಇತರೆ | ಒಟ್ಟು |
| ಚಿಕ್ಕಮಗಳೂರು | 1.548 | 6.269 | 563 | 1.111 | 13.858 | 21.801 | 450 | 29 | 35 | 1,034 | 1,548 |

**ಚಿಕ್ಕಮಗಳೂರು ತಾಲ್ಲೂಕಿನ ಮಹಿಳಾ ಸ್ವಸಹಾಯ ಸಂಘಗಳ ಬ್ಯಾಂಕಿನೊಂದಿಗೆ ಸಂಬಂಧ ಕಲ್ಪಿಸಿರುವ ಮಾಹಿತಿ**

| ಕ್ರ.ಸಂ. | ತಾಲ್ಲೂಕು ಹೆಸರು | ಬ್ಯಾಂಕಿನೊಂದಿಗೆ ಸಂಬಂಧ ಹೊಂದಿರುವ ಸ್ವ ಸಹಾಯ ಗುಂಪುಗಳ ಸಂಖ್ಯೆ | ಸಾಲ ಪಡೆಯಲು ಬ್ಯಾಂಕ್ ಸಂಬಂಧವಿರುವ ಸ್ವಸಹಾಯ ಗುಂಪುಗಳ ಸಂಖ್ಯೆ | ಬ್ಯಾಂಕ್ ಸಾಲ ದೊರೆತಿರುವ ಗುಂಪುಗಳ ಸಂಖ್ಯೆ | ಬ್ಯಾಂಕ್ ನಿಂದ ಸಾಲ ಪಡೆದ ಉದ್ದೇಶ | ಮರು ಪಾವತಿಯ ಸ್ಥಿತಿಗತಿ |
|---|---|---|---|---|---|---|
| 1 | ಚಿಕ್ಕಮಗಳೂರು | 1548 | 1548<br>1512 | 1150 | ಅಂಗಡಿ ವ್ಯಾಪಾರ<br>ವ್ಯವಸಾಯ,<br>ಹೂ ವ್ಯಾಪಾರ,<br>ಬಟ್ಟೆ ವ್ಯಾಪಾರ,<br>ಹೋಟೆಲ್,<br>ಬಳೆಅಂಗಡಿ,<br>ಹಣ್ಣಿನ ಅಂಗಡಿ,<br>ಬಟ್ಟೆ ಅಂಗಡಿ<br>ಸಾಂಬಾರ್<br>ಪುಡಿ, ಹಪ್ಪಳ,<br>ಕುಂಬಾರಿಕೆ,<br>ನರ್ಸರಿ ವ್ಯಾಪಾರ,<br>ಕುರಿಸಾಕಾಣಿಕೆ,<br>ಹೈನುಗಾರಿಕೆ | ಉತ್ತಮವಾಗಿದೆ. |

**ಮಾಹಿತಿ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು

ಈ ಮೇಲಿನ ಪಟ್ಟಿಯಿಂದ ತಿಳಿದುಬರುವ ಪ್ರಮುಖ ಅಂಶವೆಂದರೆ ತಾಲ್ಲೂಕಿನಲ್ಲಿ ರಚನೆಯಾದ 1548 ಸಂಘಗಳು ಸಹ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದೆ.

ಆದರೆ ಶೇ.72 ರಷ್ಟು ಸಂಘಗಳು ಮಾತ್ರ ಬ್ಯಾಂಕಿನಿಂದ ಸಾಲವನ್ನು ಪಡೆದು ವಿವಿಧ ರೀತಿಯ ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿವೆ ಮತ್ತು ಈ ಸಂಘಗಳ ಸಾಲ ಮರುಪಾವತಿಯು ಸಹ ಉತ್ತಮವಾಗಿದೆ. ಆದರೆ ಉಳಿದ 28% ಸ್ವಸಹಾಯ ಸಂಘಗಳು ಯಾವುದೇ ಬ್ಯಾಂಕಿನಲ್ಲೂ ಕೂಡ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳವಲ್ಲಿ ಅಸಮರ್ಥವಾಗಿವೆ. ಇಂತಹ ಸ್ವಸಹಾಯ ಸಂಘಗಳು ವಿವಿಧ ಬ್ಯಾಂಕಿನಲ್ಲಿ ಅವರಿಗೆ ಸಾಲ

ಪಡೆಯುವುದು– ಅದರ ಮರುಪಾವತಿ ಮಾಡುವುದರೊಂದಿಗೆ ಉತ್ತಮ ಸಂಪರ್ಕ ಅಥವಾ ಸಂಬಂಧವನ್ನು ಇಟ್ಟುಕೊಳ್ಳುವಂತೆ ಸರ್ಕಾರ ಮನವರಿಕೆ ಮಾಡಬೇಕಾಗಿದೆ.

**ಚಿಕ್ಕಮಗಳೂರು ತಾಲ್ಲೂಕಿನ ಮಹಿಳಾ ಸ್ವಸಹಾಯ ಸಂಘಗಳು ಹಾಗು ಇತರೆ ಚಟುವಟಿಕೆಗಳ ಮಾಹಿತಿ**

| ಕ್ರ.ಸ | ತಾಲ್ಲೂಕುಗಳ ಹೆಸರು | ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಗುಂಪುಗಳ ಸಂಖ್ಯೆ | ಚಟುವಟಿಕೆಯ ರೀತಿ: ವಿವರ | ಗ್ರಾಮದ ಅಭಿವೃದ್ಧಿಗಾಗಿ ತೊಡಗಿಸಿಕೊಂಡ ಗುಂಪುಗಳ ಸಂಖ್ಯೆ | ಸಮಾಜ ಸೇವಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಗುಂಪುಗಳ ಸಂಖ್ಯೆ | ಚಟುವಟಿಕೆಯ ರೀತಿ: ವಿವರ |
|---|---|---|---|---|---|---|
| 1 | ಚಿಕ್ಕಮಗಳೂರು | 666 | ಹೈನುಗಾರಿಕೆ, ತೋಟಗಾ–ರಿಕೆ, ವ್ಯವಸಾಯ, ಹೂವ್ಯಾಪಾರ, ಹೋಟೆಲ್, ಬಳೆಅಂಗಡಿ, ರೇಷ್ಮೆ ಬೆಳೆ, ಎರೆಹುಳುಗೊಬ್ಬರ, ಕುಂಬಾರಿಕೆ, ಲೆಟ–ರ್‌ಬ್ಯಾಗ್, ಸಾಂಬಾರ್ ಪುಡಿ, ಹಪ್ಪಳ, ಅಣಬೆ ವ್ಯವಸಾಯ, ತಿಂಡಿ ತಿನಿಸುಗಳು, ನರ್ಸರಿ | 625 | 508 | ಬಾಲ ಕಾರ್ಮಿಕರ ಪದ್ಧತಿ ನಿರ್ಮೂಲನೆ, ಬಾಲ್ಯ ವಿವಾಹವನ್ನು ತಡೆಗಟ್ಟುವುದು, ವರದಕ್ಷಿಣೆ ಪದ್ದತಿ ನಿರ್ಮೂಲನೆ, ಪಾನ ನಿರೋಧ ತಡೆಗಟ್ಟುವುದು, ವಿಧವಾ ವಿವಾಹ ಪ್ರೋತ್ಸಾಹಿಸುವುದು. |

**ಮಾಹಿತಿ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಮಗಳೂರು

ಈ ಮೇಲಿನ ಪಟ್ಟಿಯಿಂದ ತಿಳಿದು ಬರುವ ಅಂಶವೆಂದರೆ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಶೇ. 43 ರಷ್ಟು ಸಂಘಗಳು ಮತ್ತು ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿವೆ. ಈ ಅಂಶವನ್ನು ಗಮನಿಸಿದರೆ ಮಹಿಳಾ ಆರ್ಥಿಕ ಸಬಲೀಕರಣ ಸಾಕಷ್ಟು ಪ್ರಮಾಣದಲ್ಲಿ ಗ್ರಾಮೀಣ ಮಹಿಳೆಯರನ್ನು ತಲುಪುವಲ್ಲಿ ವಿಫಲವಾಗಿದೆ. ಮಹಿಳೆಯರು ಸ್ವಸಹಾಯ ಸಂಘಗಳನ್ನು ಸಣ್ಣ ಪ್ರಮಾಣದ ಉಳಿತಾಯ ಮತ್ತು ಅನೌಪಚಾರಿಕ ಉದ್ದೇಶಗಳಿಗೆ ಸಂಘಗಳಿಂದ ಸಾಲವನ್ನು ಪಡೆಯಲು ಬಳಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆಯಲ್ಲ ಇದರಿಂದ ಗ್ರಾಮೀಣ ಬಡತನ ಮತ್ತು ಅರೆಕಾಲಿಕ ನಿರುದ್ಯೋಗ ಸಮಸ್ಯೆಗಳು ಪರಿಹಾರ ಕಾಣದೆ, ನಬಾರ್ಡ್‌ನ ಮೂಲ ಉದ್ದೇಶವೆ ವಿಫಲ ಹೊಂದುತ್ತದೆ. ಶೇ. 40 ರಷ್ಟು ಸಂಘಗಳು ಗ್ರಾಮದ ಅಭಿವೃದ್ಧಿಯಲ್ಲಿ ತೊಡಗಿಕೊಂಡಿರುವುದು ಉತ್ತಮ ಬೆಳವಣಿಗೆ ಎನ್ನಬಹುದು. ಅದೇ ರೀತಿ ಶೇ. 33 ರಷ್ಟು ಸಂಘಗಳು ಸಾಮಾಜಿಕ ಪಿಡುಗುಗಳ ವಿರುದ್ಧ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ನಿರತವಾಗಿರುವುದು ಗ್ರಾಮ ಸಮಾಜದಲ್ಲಿ ಆಶಾದಾಯಕ ಬೆಳವಣಿಗೆ ಎನ್ನಬಹುದು.

**ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಸಂಘಗಳ ಪಾತ್ರ**

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಪುರುಷರಷ್ಟೆ ಸಮಾನವಾಗಿ ಮಹಿಳೆಯೂ ಕೂಡ ಭಾಗವಹಿಸಬೇಕಾಗುತ್ತದೆ. ಮಹಿಳೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಸಬಲರನ್ನಾಗಿ ಮಾಡುವುದಕ್ಕೆ ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಸಾಕಷ್ಟು ಸಮಾವೇಶಗಳು, ವಿಚಾರ ಸಂಕಿರಣಗಳು ನಡೆಯುತ್ತಿರುವುದನ್ನು ಕಾಣಬಹುದು. ಮಹಿಳಾ ಸಬಲೀಕರಣದ ದೃಷ್ಟಿಯಿಂದ ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಕಾನೂನು ಮತ್ತು ಯೋಜನೆಗಳನ್ನು ಜಾರಿಗೆ

ತಂದಿವೆ. ಹಲವಾರು ಸಂಘಸಂಸ್ಥೆಗಳು ಕೂಡ ಮಹಿಳಾ ಸಬಲೀಕರಣದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವುದನ್ನು ಕಾಣಬಹುದು ಅವುಗಳಲ್ಲಿ ಸ್ವಸಹಾಯ ಸಂಘಗಳು ಮುಂಚೂಣಿಯಲ್ಲಿವೆ. ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಸಬಲೀಕರಣ ಹೇಗೆ ಆಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಪ್ರತಿವರ್ತಿಗಳ ಆರ್ಥಿಕ, ಸಾಮಾಜಿಕ, ಹಿನ್ನೆಲೆಯನ್ನು ತಿಳಿದುಕೊಳ್ಳುವುದರ ಜತೆಗೆ ಸ್ವಸಹಾಯ ಸಂಘಗಳಲ್ಲಿ ಮಹಿಳೆಯರ ಕಾರ್ಯಚಟುವಟಿಕೆಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಈ ಕೆಳಗಿನ ಕೋಷ್ಠಕಗಳ ಮೂಲಕ ಸ್ವಸಹಾಯ ಸಂಘಗಳಲ್ಲಿ ಸದಸ್ಯರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಿನ್ನೆಲೆಗಳ ಜತೆಗೆ ಕಾರ್ಯಚಟುವಟಿಕೆಗಳನ್ನು ತಿಳಿದುಕೊಳ್ಳಬಹುದು.

ಈ ಅಧ್ಯಯನದಲ್ಲಿ ಸ್ವಸಹಾಯ ಸಂಘಗಳಲ್ಲಿನ ಪ್ರತಿವರ್ತಿಗಳ ವಯಸ್ಸು ಶೈಕ್ಷಣಿಕ ಮಟ್ಟ, ವೈವಾಹಿಕ ಅಂತಸ್ತು ಮೊದಲಾದವುಗಳನ್ನು ಕ್ಷೇತ್ರಾಧ್ಯಯನದಿಂದ ಚರ್ಚಿಸಲಾಗಿದೆ.

**ಶೈಕ್ಷಣಿಕ ಅಂತಸ್ತು**

ಮಹಿಳೆ ಸಬಲಳಾಗಬೇಕಾದರೆ ಆಕೆಗೆ ಉತ್ತಮ ಶಿಕ್ಷಣದ ಅವಶ್ಯಕತೆಯಿದೆ. ಶಿಕ್ಷಣ ಪಡೆದ ಮಹಿಳೆ ಏನನ್ನಾದರೂ ಸಾಧಿಸಬಲ್ಲಳು ಅಜ್ಞಾನ ಮೂಢನಂಬಿಕೆಗಳಿಂದ ಮಹಿಳೆಯರನ್ನು ಮುಕ್ತರನ್ನಾಗಿ ಮಾಡಬೇಕಾದರೆ ಶಿಕ್ಷಣವೇ ಮುಖ್ಯವಾಗುತ್ತದೆ. ಸ್ವಸಹಾಯ ಸಂಘಗಳ ಮೂಲಕ ಬ್ಯಾಂಕಿನ ವ್ಯವಹಾರಗಳಲ್ಲಿ ಪಾಲ್ಗೊಳ್ಳಲು, ಸರಕಾರದ ಯೋಜನೆಗಳ ಬಗ್ಗೆ ಅರಿವು ಹೊಂದಲು, ಸಂಘದ ಲೆಕ್ಕಪತ್ರ ನಿರ್ವಹಣೆಯಲ್ಲಿ, ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ.

**ಪ್ರತಿವರ್ತಿಗಳ ಶೈಕ್ಷಣಿಕಮಟ್ಟವನ್ನು ತೋರಿಸುವ ಕೋಷ್ಟಕ**

| ವಯೋಗರಿಷ್ಠ | | ಶೈಕ್ಷಣಿಕ ಮಟ್ಟ | | | ಒಟ್ಟು |
|---|---|---|---|---|---|
| | ಪ್ರಾಥಮಿಕ ಶಿಕ್ಷಣ | ಪ್ರೌಢಶಿಕ್ಷಣ | ಪದವಿಪೂರ್ವ | ಪದವಿ | |
| 18–34 | 4 (12) | 6.3 (19) | 10.3 (31) | 2 (6) | 22.6 (68) |
| 35–50 | 16.6 (59) | 32.6 (98) | 4.6 (14) | 0.6 (2) | 57.6 (173) |
| 51 ಮತ್ತು ಮೇಲ್ಪಟ್ಟು | 13 (19) | 6.3 (19) | 0.3 (1) | ಓಟ | 19.6 (59) |
| ಒಟ್ಟು | 36.6% (110) | 45.3%(136) | 15.3% (46) | 2.6 (8) | 100% (300) |

ಈ ಮೇಲಿನ ಕೋಷ್ಠಕದ ಪ್ರಕಾರ 300 ಪ್ರತಿವರ್ತಿಗಳಲ್ಲಿ ಪ್ರಾಥಮಿಕ ಶಿಕ್ಷಣದ ವರ್ಗದಲ್ಲಿ ಶೇ 4 ರಷ್ಟು ಮಹಿಳಾ ಸದಸ್ಯರು 18 ರಿಂದ 34ರ ವಯೋಮಾನದವರಾಗಿರುತ್ತಾರೆ. ಶೇ.19.6 ರಷ್ಟು ಮಹಿಳಾ ಸದಸ್ಯರು 35 ರಿಂದ 50ರ ವಯೋಮಾನದವರಾಗಿರುತ್ತಾರೆ. ಮತ್ತು ಶೇ 13 ರಷ್ಟು ಮಹಿಳಾ ಸದಸ್ಯರು 51 ಮತ್ತು ಮೇಲ್ಪಟ್ಟು ವಯಸ್ಸಿನವರಾಗಿರುತ್ತಾರೆ.

ಅಂತೆಯೇ ಪ್ರೌಢಶಿಕ್ಷಣದ ವರ್ಗದಲ್ಲಿ 136 ಪ್ರತಿವರ್ತಿಗಳಲ್ಲಿ ಶೇ 6.3 ರಷ್ಟು ಮಹಿಳಾ ಸದಸ್ಯರು 18 ರಿಂದ 34ರ ವಯೋಮಾನದವರಾಗಿರುತ್ತಾರೆ ಹಾಗೂ ಶೇ 32.6 ರಷ್ಟು ಮಹಿಳಾ ಸದಸ್ಯರು 35 ರಿಂದ 50ರ ವಯೋಮಾನದವರಾಗಿರುತ್ತಾರೆ. ಮತ್ತು ಶೇ 6.3 ರಷ್ಟು ಮಹಿಳಾ ಸದಸ್ಯರು 51 ಮತ್ತು ಮೇಲ್ಪಟ್ಟಿನ ವಯಸ್ಸಿನವರಗಿರುತ್ತಾರೆ.

ಪದವಿಪೂರ್ವ ಶಿಕ್ಷಣದ ವರ್ಗದಲ್ಲಿ 46 ಪ್ರತಿವರ್ತಿಗಳಲ್ಲಿ ಶೇ 10.3 ರಷ್ಟು ಮಹಿಳಾ ಸದಸ್ಯರು 18 ರಿಂದ 34ರ ವಯೋಮಾನದವರಾಗಿರುತ್ತಾರೆ. ಹಾಗೂ ಶೇ 4.6 ರಷ್ಟು ಮಹಿಳಾ ಸದಸ್ಯರು 35 ರಿಂದ 50 ರ ವಯೋಮಾನದವಾಗಿರುತ್ತಾರೆ ಮತ್ತು ಶೇ 0.3 ರಷ್ಟು ಮಹಿಳಾ ಸದಸ್ಯರು 51 ಮತ್ತು ಮೇಲ್ಪಟ್ಟ ವಯಸ್ಸಿನವರಾಗಿರುತ್ತಾರೆ.

ಪದವಿ ಶಿಕ್ಷಣದ ವರ್ಗದಲ್ಲಿ 4 ಪ್ರತಿವರ್ತಿಗಳಲ್ಲಿ ಶೇ 2 ರಷ್ಟು ಮಹಿಳಾ ಸದಸ್ಯರು 18

ರಿಂದ 34ರ ವಯೋಮಾನದವರಾಗಿರುತ್ತಾರೆ. ಹಾಗೂ ಶೇ.0.6 ರಷ್ಟು ಮಹಿಳಾ ಸದಸ್ಯರು 35 ರಿಂದ 50 ರ ವಯೋಮಾನದವರಾಗಿರುತ್ತಾರೆ ಮತ್ತು 51 ಮತ್ತು ಮೇಲ್ಪಟ್ಟ ವಯೋಮಾನದಲ್ಲಿ ಯಾರು ಪದವಿಯನ್ನು ಪಡೆದಿರುವುದಿಲ್ಲ.

**ಕೌಟುಂಬಿಕ ಮುಖ್ಯಸ್ಥಿಕೆ**

ಭಾರತೀಯ ಸಮಾಜದಲ್ಲಿ ಬಹುತೇಕ ಕುಟುಂಬದಲ್ಲಿ ಪುರುಷರೇ ಕುಟುಂಬದ ಮುಖ್ಯಸ್ಥರಾಗಿರುತ್ತಾರೆ ತಂದೆಯ ನಂತರ ಅವರ ಮಗ ಕುಟುಂಬದ ಮುಖ್ಯಸ್ಥಿಕೆಯನ್ನು ವಹಿಸಿದರೆ ಕೆಲವು ಕುಟುಂಬಗಳಲ್ಲಿ ಪತಿಯ ಮರಣಾನಂತರ ಹೆಂಡತಿಯು ಕುಟುಂಬದ ಮುಖ್ಯಸ್ಥಿಕೆಯ ಜವಾಬ್ದಾರಿಯನ್ನು ವಹಿಸುತ್ತಾಳೆ. ಕೌಟುಂಬಿಕ ಮುಖ್ಯಸ್ಥಿಕೆಯ ಜವಾಬ್ದಾರಿಯ ಪಟ್ಟಿಯನ್ನು ಈ ಕೆಳಗಿನಂತೆ ಕಾಣಬಹುದು.

**ಕೌಟುಂಬಿಕ ಮುಖ್ಯಸ್ಥಿಕೆ ಕೋಷ್ಟಕ**

| ಮುಖ್ಯಸ್ಥಿಕೆ | ಸಂಖ್ಯೆ | ಶೇಕಡವಾರು |
|---|---|---|
| ಪುರುಷರು | 272 | 90.6% |
| ಮಹಿಳೆಯರು | 28 | 9.3% |
| ಒಟ್ಟು | 300 | 100% |

**ಮೂಲ:** ಕ್ಷೇತ್ರಾಧ್ಯಯನ

ಈ ಕೋಷ್ಟಕದ ಪ್ರಕಾರ ಒಟ್ಟು 300 ಪ್ರತಿವರ್ತಿ ಕುಟುಂಬಗಳಲ್ಲಿ ಶೇ 90.6 ರಷ್ಟು ಕುಟುಂಬಗಳಲ್ಲಿ ಪುರುಷರು ಮುಖ್ಯಸ್ಥಿಕೆಯನ್ನು ವಹಿಸಿರುತ್ತಾರೆ ಹಾಗೂ ಶೇ 9.3 ರಷ್ಟು ಕುಟುಂಬಗಳಲ್ಲಿ ಮಹಿಳೆಯರು ಮುಖ್ಯಸ್ಥಿಕೆ ವಹಿಸಿರುತ್ತಾರೆ ಎಂದು ತಿಳಿಯುತ್ತಾರೆ.

**ಕುಟುಂಬದ ಪ್ರಮುಖ ಆದಾಯದ ಮೂಲ**

ಆದಾಯದ ಮೂಲವು ಕುಟುಂಬದ ಆರ್ಥಿಕ ಅಂತಸ್ತನ್ನು ನಿರ್ಧರಿಸುವುದಲ್ಲದೆ, ಜನರ ಜೀವನ ಮಟ್ಟವನ್ನು ನಿರ್ಧರಿಸುತ್ತದೆ. ಪ್ರತಿವರ್ತಿಗಳ ಕುಟುಂಬದ ಆದಾಯದ ಮೂಲವು ಪ್ರಮುಖವಾಗಿ ಕೃಷಿ, ಪಶುಸಂಗೋಪನೆ ವ್ಯಾಪಾರ ವ್ಯವಹಾರ ಮೊದಲಾದವುಗಳನ್ನು ಅವಲಂಬಿಸಿದೆ. ಈ ಕೆಳಗಿನ ಪಟ್ಟಿಯ ಮೂಲಕ ಪ್ರತಿವರ್ತಿಗಳ ಆದಾಯದ ಮೂಲವನ್ನು ತಿಳಿದುಕೊಳ್ಳಬಹುದು.

**ಆದಾಯದ ಮೂಲವನ್ನು ತೋರಿಸುವ ಕೋಷ್ಟಕ**

| ಆದಾಯದ ಮೂಲ | ಸಂಖ್ಯೆ | ಶೇಕಡ |
|---|---|---|
| ಕೃಷಿ | 168 | 56% |
| ವ್ಯಾಪಾರ | 32 | 10.6% |
| ಪಶುಸಂಗೋಪನೆ | 80 | 26.6% |
| ಸೇವೆ | ಇಲ್ಲ | ಇಲ್ಲ |
| ಇತರೆ | 20 | 66 |
| ಒಟ್ಟು | 300 | 100% |

**ಮೂಲ:**–ಕ್ಷೇತ್ರಾಧ್ಯಯನ

ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 300 ಪ್ರತಿವರ್ತಿಗಳಲ್ಲಿ ಶೇ 56 ರಷ್ಟು ಮಹಿಳಾ ಸದಸ್ಯರ ಆದಾಯದ ಮೂಲ ಕೃಷಿಯಾದರೆ ಶೇ 10.6% ರಷ್ಟು ಮಹಿಳಾ ಸದಸ್ಯರ ಆದಾಯದ ಮೂಲ ವ್ಯಾಪಾರವಾಗಿದೆ. ಹಾಗೂ ಶೇ 26.6 ರಷ್ಟು ಮಹಿಳಾ ಸದಸ್ಯರು ಪಶುಸಂಗೋಪನೆಯಿಂದ ಆದಾಯವನ್ನು ಗಳಿಸುತ್ತಿದ್ದಾರೆ, ಮತ್ತು ಶೇ 6.6 ರಷ್ಟು ಮಹಿಳಾ

ಸದಸ್ಯರುಗಳು ಇತರೆ ಮೂಲಗಳಿಂದ ಆದಾಯಗಳಿಸುತ್ತಿದ್ದಾರೆ ಎಂದು ತಿಳಿದುಬರುತ್ತದೆ.

**ಕುಟುಂಬದ ಆದಾಯ**

ಪ್ರತಿವರ್ತಿಗಳ ಕುಟುಂಬದ ಆದಾಯದ ಮೂಲವು ಕೃಷಿ, ಸಣ್ಣ ವ್ಯಾಪಾರ ಪಶುಸಂಗೋಪನೆ, ಮೊದಲಾದವುಗಳನ್ನು ಅವಲಂಬಿಸಿರುವುದರಿಂದ ಬಹುತೇಕ ಕುಟುಂಬಗಳು ಮಾಸಿಕ ಆದಾಯದ ದಾಖಲೆಗಳನ್ನು ನಿರ್ವಹಣೆ ಮಾಡಿಲ್ಲ. ಸ್ವಸಹಾಯ ಸಂಘಗಳಿಗೆ ಸೇರಿ ವಿವಿಧ ಚಟುವಟಿಕೆಗಳಿಗೆ ತೊಡಗಿಸಿಕೊಂಡ ನಂತರ ಕುಟುಂಬದ ವಾರ್ಷಿಕ ಆದಾಯ ಈ ಕೆಳಗಿನಂತೆ ಕಂಡುಬರುತ್ತದೆ.

**ಪ್ರತಿವರ್ತಿಗಳ ಕುಟುಂಬದ ವಾರ್ಷಿಕ ಆದಾಯವನ್ನು ತೋರಿಸುವ ಕೋಷ್ಟಕ**

| ಕುಟುಂಬದ ಆದಾಯ (ರೂಗಳಲ್ಲಿ) | ಸಂಖ್ಯೆ | ಶೇಕಡ |
|---|---|---|
| 30,000–60,000 | 102 | 34% |
| 60,000–90,000 | 84 | 28% |
| 90,000–1,20,000 | 63 | 21% |
| 1,20,000 ಮತ್ತು ಅದಕ್ಕೂ ಮೇಲ್ಪಟ್ಟು | 50 | 17% |
| ಒಟ್ಟು | 300 | 100% |

**ಮೂಲ:** ಕ್ಷೇತ್ರಾಧ್ಯಯನ

ಈ ಮೇಲಿನ ಕೋಷ್ಟಕದ ಪ್ರಕಾರ 300 ಪ್ರತಿವರ್ತಿಗಳಲ್ಲಿ ಶೇ 34 ರಷ್ಟು ಮಹಿಳಾ ಸದಸ್ಯರುಗಳು ವಾರ್ಷಿಕ 30,000–60,000 ರವರೆಗೆ ಆದಾಯಗಳಿಸಿದರೆ ಶೇ. 28ರಷ್ಟು ಮಹಿಳಾ ಸದಸ್ಯರುಗಳು ವಾರ್ಷಿಕ 60,000–90,000 ರವರೆಗೆ ಆದಾಯವನ್ನು ಗಳಿಸುತ್ತಿದ್ದಾರೆ. ಹಾಗೂ ಶೇ 21 ರಷ್ಟು ಮಹಿಳಾ ಸದಸ್ಯರುಗಳು ವಾರ್ಷಿಕ 90,000–1,20,000 ರವರೆಗೆ ಗಳಿಸಿದರೆ ಶೇ 17 ರಷ್ಟು ಮಹಿಳಾ ಸದಸ್ಯರುಗಳು 1,20,000 ಮತ್ತು ಅದಕ್ಕೂ ಮೇಲ್ಪಟ್ಟು ಆದಾಯವನ್ನು ಹೊಂದಿದ್ದಾರೆ.

**ಸ್ವಸಹಾಯ ಸಂಘಗಳಿಗೆ ತರಬೇತಿ**

ಸ್ವಸಹಾಯ ಸಂಘಗಳ ಮೂಲಕ ಗುಂಪಿನ ಸದಸ್ಯರಿಗೆ ನೀಡುವ ತರಬೇತಿಯು ಸದಸ್ಯರ ಆತ್ಮವಿಶ್ವಾಸವನ್ನು ಹೆಚ್ಚಿಸುವುದಲ್ಲದೆ ಮಹಿಳೆಯರ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುತ್ತವೆ. ಕರ್ನಾಟಕ ರಾಜ್ಯ ಸಹಕಾರಿ ಮಂಡಳಿ ಮತ್ತು ಜಿಲ್ಲಾ ಸಹಕಾರಿ ಒಕ್ಕೂಟಗಳು ಸ್ವಸಹಾಯ ಸಂಘದ ಸದಸ್ಯರುಗಳಿಗೆ ತರಬೇತಿ ನೀಡುವ ಪ್ರಮುಖ ಸಂಸ್ಥೆಗಳಾಗಿವೆ. ಆದರೆ ಪ್ರತಿವರ್ತಿಗಳಲ್ಲಿ ಬಹುತೇಕ ಪ್ರತಿವರ್ತಿಗಳು ತರಬೇತಿ ಕಾರ್ಯದಲ್ಲಿ ಭಾಗವಹಿಸದೆ ಇರುವುದು ಕಂಡುಬರುತ್ತದೆ.

**ಪ್ರತಿವರ್ತಿಗಳ ತರಬೇತಿ ಭಾಗವಹಿಸುವಿಕೆಯನ್ನು ತೋರಿಸುವ ಕೋಷ್ಟಕ**

| ತರಬೇತಿಯಲ್ಲಿ ಭಾಗವಹಿಸುವಿಕೆ | ಸಂಖ್ಯೆ | ಶೇಕಡ |
|---|---|---|
| ಹೌದು | 110 | 36.6% |
| ಇಲ್ಲ | 190 | 63.3% |
| ಒಟ್ಟು | 300 | 100% |

**ಮೂಲ:** ಕ್ಷೇತ್ರಾಧ್ಯಯನ

ದತ್ತಾಂಶಗಳ ಪ್ರಕಾರ ಕೋಷ್ಟಕದಲ್ಲಿ ಶೇ 36.6ರಷ್ಟು ಮಹಿಳಾ ಸದಸ್ಯರುಗಳು ಭಾಗವಹಿಸಿದರೆ, ಶೇಕಡ 63.3 ರಷ್ಟು ಮಹಿಳಾ ಸದಸ್ಯರುಗಳು ಯಾವುದೇ ತರಬೇತಿಯಲ್ಲಿ ಭಾಗವಹಿಸಿಲ್ಲ.

ತರಬೇತಿಯಲ್ಲಿ ಪ್ರಮುಖವಾಗಿ ಕೌಶಲ್ಯ ಅಭಿವೃದ್ಧಿ ಮಾರಾಟ ವ್ಯವಸ್ಥೆ, ಮಾರುಕಟ್ಟೆ, ಸೌಲಭ್ಯಗಳು, ಗುಂಪಿನ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ, ಉಳಿತಾಯದ ಮಹತ್ವ, ಸಾಲ ಮರುಪಾವತಿ ಮೊದಲಾದವುಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ ಆದರೂ ಸಹ ಸದಸ್ಯರ ಆಸಕ್ತಿ ಕೊರತೆಯಿಂದ ಸದಸ್ಯರುಗಳು ತರಬೇತಿಯಲ್ಲಿ ಭಾಗವಹಿಸದೆ ಇರುವುದು ಕಂಡುಬರುತ್ತದೆ.

**ಮಿತವ್ಯಯ ಮತ್ತು ಸಾಲ**

ಗ್ರಾಮೀಣ ಭಾಗದಲ್ಲಿ ಜನರಿಗೆ ಸಾಲವನ್ನು ಭೂಮಿಯ ಆಧಾರದ ಮೇಲೆ ನೀಡಲಾಗುತ್ತದೆ. ಆದರೆ ಗ್ರಾಮೀಣ ಭಾಗದಲ್ಲಿ ಮಹಿಳೆಯರು ಭೂಮಿಯ ಒಡೆಯರಾಗಿರುವುದಿಲ್ಲ ಇದರಿಂದ ಮಹಿಳೆಯರು ಹಣದ ಲೇವಾದೇವಿಗಾರರನ್ನು ಅವಲಂಬಿಸಬೇಕಾಗಿತ್ತಲ್ಲದೆ ಹೆಚ್ಚಿನ ಬಡ್ಡಿದರವನ್ನು ಕಟ್ಟಬೇಕಾಗಿತ್ತು. ಇದರಿಂದ ಹೊರಬರಲು ಸ್ವಸಹಾಯ ಸಂಘದಲ್ಲಿನ ಮಹಿಳೆಯರಿಗೆ ದೊರೆತ ಸೌಲಭ್ಯವೆ ಕಡಿಮೆ ಬಡ್ಡಿದರದ ಸಾಲ ಪ್ರಾರಂಭದಲ್ಲಿ ಸ್ವಸಹಾಯ ಸಂಘದಲ್ಲಿನ ಸದಸ್ಯರ ಉಳಿತಾಯದ ಆಧಾರದ ಮೇಲೆ ಆದ್ಯತೆಯ ಮೇರೆಗೆ ಸದಸ್ಯರುಗಳಿಗೆ ಸಂಘವು ನಿರ್ಧರಿಸಿದ ಬಡ್ಡಿದರದ ಮೇಲೆ ಸಾಲವನ್ನು ನೀಡುತ್ತವೆ. ಗುಂಪಿನ ಉಳಿತಾಯ ಮತ್ತು ಕಾರ್ಯಚಟುವಟಿಕೆಗಳನ್ನು ನೋಡಿ ಬ್ಯಾಂಕ್‌ಗಳು ಕೂಡ ಗುಂಪಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ನೀಡುತ್ತವೆ. ಸ್ವಸಹಾಯ ಸಂಘದ ಸದಸ್ಯರುಗಳಲ್ಲಿ ಕೆಲವು ಸದಸ್ಯರು ಆದಾಯೋತ್ಪನ್ನ ಚಟುವಟಿಕೆಗಳಿಗೆ ಸಾಲವನ್ನು ಬಳಸಿದರೆ ಹಲವು ಸದಸ್ಯರು ಸಾಲವನ್ನು ಮಕ್ಕಳ ವಿದ್ಯಾಭ್ಯಾಸ, ಮಕ್ಕಳ ವಿವಾಹಕ್ಕೆ, ಕುಟುಂಬದ ಸಾಲ ತೀರಿಸಲು ಬಳಸುತ್ತಾರೆ. ಸಾಲವನ್ನು ಯಾವುದೇ ಉದ್ದೇಶಕ್ಕೆ ತೆಗೆದುಕೊಂಡರೂ ಸಹ ಬ್ಯಾಂಕಿನ ವ್ಯವಹಾರ, ಉಳಿತಾಯ, ಮೊದಲಾದ ವಿಷಯಗಳ ಬಗ್ಗೆ ಎಲ್ಲಾ ಸದಸ್ಯರಿಗೂ ಜ್ಞಾನದೊರೆಯುತ್ತದೆ.

**ಸ್ವಸಹಾಯ ಸಂಘದ ಮೂಲಕ ಆದಾಯೋತ್ಪನ್ನ ಚಟುವಟಿಕೆಗಳನ್ನು ತೋರಿಸುವ ಕೋಷ್ಟಕ**

| ಆದಾಯ ಉತ್ಪಾದನ ಚಟುವಟಿಕೆಗಳು | ಸಂಖ್ಯೆ | ಶೇಕಡ |
|---|---|---|
| ಹೌದು | 120 | 40% |
| ಇಲ್ಲ | 180 | 60% |
| ಒಟ್ಟು | 300 | 100% |

**ಮೂಲ** ಕ್ಷೇತ್ರಾಧ್ಯಯನ

**ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಪ್ರತಿವರ್ತಿಗಳ ಪಾತ್ರ**

ಕುಟುಂಬದ ನಿರ್ವಹಣೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಪುರುಷ ಮತ್ತು ಮಹಿಳೆ ಇಬ್ಬರ ಭಾಗವಹಿಸುವಿಕೆಯು ಪ್ರಮುಖ ಪಾತ್ರವಹಿಸುತ್ತದೆ. ಆದರೆ ಸಾಮಾನ್ಯವಾಗಿ ಕುಟುಂಬದ ಪ್ರಮುಖ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಆದಾಯ ಸಂಪಾದಿಸುವ ವ್ಯಕ್ತಿ ಪ್ರಮುಖ ಪಾತ್ರವಹಿಸುತ್ತಾರೆ. ಉದಾ:- ಮಕ್ಕಳ ವಿದ್ಯಾಭ್ಯಾಸ, ವಿವಾಹ, ಧಾರ್ಮಿಕ ಕಾರ್ಯಗಳು ಮೊದಲಾದವುಗಳ ಬಗ್ಗೆ ಆದರೆ ಮಹಿಳೆಯರು ಸಹ ಸ್ವಸಹಾಯ ಸಂಘಗಳಿಗೆ ಸೇರಿ ಆದಾಯ ಸಂಪಾದಿಸುವ ಒಂದು ಭಾಗವಾಗುತ್ತಿರುವುದರಿಂದ ಕುಟುಂಬದ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಪುರುಷನಂತೆ ಮಹಿಳೆ ಭಾಗವಹಿಸುತ್ತಿರುವುದನ್ನು ಈ ಕೆಳಗಿನ ಕೋಷ್ಟಕದಿಂದ ಕಾಣಬಹುದು.

**ಕುಟುಂಬದ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನ**

**ತೋರಿಸುವ ಕೋಷ್ಟಕ**

| ತೀರ್ಮಾನ ತೆಗೆದುಕೊಳ್ಳುವಿಕೆ | ಸಂಖ್ಯೆ | ಶೇಕಡ |
|---|---|---|
| ಹೌದು | 183 | 61% |
| ಇಲ್ಲ | 117 | 39% |
| ಒಟ್ಟು | 300 | 100% |

**ಮೂಲ:** ಕ್ಷೇತ್ರಾಧ್ಯಯನ

ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 300 ಪ್ರತಿವರ್ತಿಗಳಲ್ಲಿ ಶೇ 61 ರಷ್ಟು ಮಹಿಳಾ ಸದಸ್ಯರುಗಳು ಕುಟುಂಬದ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸಿದ್ದರೆ ಶೇ 39 ರಷ್ಟು ಮಹಿಳಾ ಸದಸ್ಯರುಗಳು ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುತ್ತಿಲ್ಲ ಎಂದು ತಿಳಿದುಬರುತ್ತದೆ. ಪ್ರತಿವರ್ತಿಗಳು ಸ್ವಸಹಾಯ ಸಂಘದ ಸದಸ್ಯರಾದ ಮೇಲೆ ಕುಟುಂಬದ ವಿಷಯಗಳ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುತ್ತಿರುವ ಪ್ರಮಾಣಹೆಚ್ಚಾಗುತ್ತಿದೆ ಎಂದು ದತ್ತಾಂಶಗಳಿಂದ ತಿಳಿದು ಬರುತ್ತದೆ.

**ಕುಟುಂಬದ ಹೊರಗೆ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಪ್ರತಿವರ್ತಿಗಳ ಭಾಗವಹಿಸುವಿಕೆ**

ಸ್ವಸಹಾಯ ಸಂಘಗಳಿಂದ ಪಡೆದ ತರಬೇತಿ, ಅನುಭವ, ಬ್ಯಾಂಕಿನ ವ್ಯವಹಾರದ ಜ್ಞಾನದಿಂದಾಗಿ ಊರಿನ, ಸಾಮಾಜಿಕ, ಧಾರ್ಮಿಕ ಮತ್ತು ಊರಿನ ಅಭಿವೃದ್ಧಿ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಮಹಿಳೆಯರು ಭಾಗವಹಿಸುತ್ತಿರುವುದನ್ನು ಕಾಣಬಹುದು. ಸರ್ಕಾರದ ಎಸ್‌ಎಚ್‌ಜಿ ಮತ್ತು ಸ್ತ್ರೀ ಶಕ್ತಿ ಸಂಘಗಳ ಅಭಿವೃದ್ಧಿ ಕಾರ್ಯಕ್ರಮಗಳು ಸಹ ಮಹಿಳೆಯರನ್ನು ಕುಟುಂಬದ ಹೊರಗೆ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುವಂತೆ ಮಾಡುತ್ತಿವೆ.

**ಕುಟುಂಬದ ಹೊರಗೆ ತೀರ್ಮಾನ ತೆಗೆದುಕೊಳ್ಳುವಿಕೆಯನ್ನು ತೋರಿಸುವ ಪಟ್ಟಿ**

| ತೀರ್ಮಾನ ತೆಗೆದುಕೊಳ್ಳುವಿಕೆ | ಸಂಖ್ಯೆ | ಶೇಕಡ |
|---|---|---|
| ಹೌದು | 170 | 56.6% |
| ಇಲ್ಲ | 130 | 43.3% |
| ಒಟ್ಟು | 300 | 100% |

**ಮೂಲ:** ಕ್ಷೇತ್ರಾಧ್ಯಯನ

ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 300 ಪ್ರತಿವರ್ತಿಗಳಲ್ಲಿ ಶೇ 56.6 ರಷ್ಟು ಮಹಿಳಾ ಸದಸ್ಯರುಗಳು ಕುಟುಂಬದ ಹೊರಗೆ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಭಾಗವಹಿಸಿದರೆ ಶೇ 43.3 ರಷ್ಟು ಮಹಿಳೆಯರು ಭಾಗವಹಿಸುತ್ತಿಲ್ಲ ಎಂದು ತಿಳಿಯುತ್ತದೆ.

ಒಟ್ಟಿನಲ್ಲಿ ಮಹಿಳೆಯರು ಸ್ವಸಹಾಯ ಸಂಘದ ಸದಸ್ಯರಾದ ನಂತರ ಕುಟುಂಬದ ಹೊರಗೆ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುತ್ತಿರುವ ಪ್ರಮಾಣ ಉತ್ತಮವಾಗುತ್ತಿದೆ ಎಂದು ತಿಳಿದುಬರುತ್ತದೆ.

**ಸ್ವಸಹಾಯ ಸಂಘಗಳ ಸಭೆ ಏರ್ಪಡಿಸುವಿಕೆ**

ಸ್ವಸಹಾಯ ಸಂಘಗಳ ಪ್ರತಿನಿಧಿಗಳು ತಮ್ಮ ಗುಂಪಿನ ಸದಸ್ಯರುಗಳಿಗೆ ಸಾಲ, ಉಳಿತಾಯ, ಗ್ರಾಮದ ಸಮಸ್ಯೆಗಳ ಬಗ್ಗೆ, ಸರ್ಕಾರದ ಯೋಜನೆಗಳ ಬಗ್ಗೆ ಚರ್ಚಿಸಲು ನಿಯಮಿತವಾಗಿ ಕಾಲದಿಂದ ಕಾಲಕ್ಕೆ ಸಭೆಗಳನ್ನು ಕರೆಯಲಾಗುತ್ತದೆ. ಸದಸ್ಯರುಗಳಿಗೆ ಸಭೆಗಳಲ್ಲೂ ಹಾಜರಾತಿ ಕಡ್ಡಾಯವಾಗಿರುತ್ತದೆ. ಗೈರುಹಾಜರಾದರೆ ಸದಸ್ಯರುಗಳಿಗೆ ತಮ್ಮ ವಿಚಾರ ವಿನಿಮಯಗಳನ್ನು ಕುಟುಂಬದ ಹೊರಗಿನ ಸದಸ್ಯರೊಂದಿಗೆ ಹಂಚಿಕೊಳ್ಳುವ

ವಾತಾವರಣ ಉಂಟಾಗುತ್ತದೆ. ಸ್ವಸಹಾಯ ಸಂಘಗಳಲ್ಲಿ ಗೈರು ಹಾಜರಾದ ಸದಸ್ಯರಿಗೆ ಗುಂಪಿನ ನಿರ್ಧಾರದಂತೆ 10 ರಿಂದ 50 ರೂಗಳ ವರೆಗೆ ದಂಡವಿರುತ್ತದೆ.

**ಸ್ವಸಹಾಯ ಸಂಘಗಳ ಸಭೆ ಏರ್ಪಡಿಸುವಿಕೆಯನ್ನು ತೋರಿಸುವ ಕೋಷ್ಟಕ**

| ಸಭೆ ಏರ್ಪಡಿಸುವಿಕೆ | ಸಂಖ್ಯೆ | ಶೇಕಡ |
|---|---|---|
| ಹೌದು | 165 | 55% |
| ಇಲ್ಲ | 135 | 45% |
| ಒಟ್ಟು | 300 | 100% |

**ಮೂಲ;–** ಕ್ಷೇತ್ರಾಧ್ಯಯನ

ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 300 ಪ್ರತಿವರ್ತಿಗಳಲ್ಲಿ ಶೇ 55 ರಷ್ಟು ಮಹಿಳಾ ಸದಸ್ಯರುಗಳು ಸ್ವ ಸಹಾಯ ಸಂಘಗಳಲ್ಲಿ ಸಭೆ ಏರ್ಪಡಿಸುವಿಕೆ ಉತ್ತಮವಾಗಿದೆ ಎಂದು ಹೇಳಿದರೆ ಶೇ 45 ರಷ್ಟು ಮಹಿಳಾ ಸದಸ್ಯರುಗಳು ನಿಯಮಿತವಾಗಿ ಸಭೆ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ.

**ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಸಂಘದ ಮಹಿಳಾ ಸದಸ್ಯರ ಪಾತ್ರ**

| ಗ್ರಾಮೀಣಾಭಿವೃದ್ಧಿ ಚಟುವಟಿಕೆ ಪ್ರತಿಕ್ರಿಯೆ | ಸಂಖ್ಯೆ | ಶೇಕಡ |
|---|---|---|
| ಹೌದು | 203 | 67.6% |
| ಇಲ್ಲ | 97 | 32.3% |
| ಒಟ್ಟು | 300 | 100% |

ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 300 ಪ್ರತಿವರ್ತಿಗಳಲ್ಲಿ ಶೇ 67.6 ರಷ್ಟು ಮಹಿಳಾ ಸದಸ್ಯರುಗಳು ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದರೆ ಶೇಕಡ 32.3 ರಷ್ಟು ಮಹಿಳಾ ಸದಸ್ಯರು ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿಸಿಕೊಂಡಿಲ್ಲ ಎಂದು ತಿಳಿದುಬರುತ್ತದೆ.

ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಸಂಘದ ಪಾತ್ರ ಪ್ರಮುಖವಾದುದು. ಗ್ರಾಮನೈರ್ಮಲ್ಯ ಕಾಪಾಡುವುದು. ಕುಡಿಯುವ ನೀರಿನ ಪೂರೈಕೆ ಹಾಗೂ ಗ್ರಾಮದ ಜನರ ಆರೋಗ್ಯದ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮುಂತಾದವುಗಳು. ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಸಂಘದ ಸದಸ್ಯರ ಪಾತ್ರ ಉತ್ತಮವಾಗಿದೆ ಎಂದು ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ.

**ಸಮಾಜ ಸೇವಾ ಚಟುವಟಿಕೆಯಲ್ಲಿ ಸ್ವಸಹಾಯ ಸಂಘದ ಮಹಿಳಾ ಸದಸ್ಯರ ಪಾತ್ರ**

| ಸಮಾಜ ಸೇವಾ ಚಟುವಟಿಕೆ ಪ್ರತಿಕ್ರಿಯೆ | ಸಂಖ್ಯೆ | ಶೇಕಡ |
|---|---|---|
| ಹೌದು | 223 | 74.3% |
| ಇಲ್ಲ | 77 | 25.6% |
| ಒಟ್ಟು | 300 | 100% |

**ಮೂಲ:** ಕ್ಷೇತ್ರಾಧ್ಯಯನ

ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 300 ಪ್ರತಿವರ್ತಿಗಳಲ್ಲಿ ಶೇ 74.3 ರಷ್ಟು ಮಹಿಳಾ ಸದಸ್ಯರುಗಳು ಸಮಾಜ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ ಶೇ 25.6 ರಷ್ಟು ಮಹಿಳಾ ಸದಸ್ಯರುಗಳು ಸಮಾಜ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿಲ್ಲ ಎಂದು ತಿಳಿದು ಬರುತ್ತದೆ.

ಸಮಾಜದಲ್ಲಿ ಕೆಲವೊಂದು ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿದ್ದು ಅವುಗಳ ವಿರುದ್ಧ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸದಸ್ಯರುಗಳು ಮಾಡುತ್ತಿದ್ದಾರೆ. ಅವುಗಳಲ್ಲಿ

ಪ್ರಮುಖವಾದವುಗಳೆಂದರೆ ಬಾಲಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿ ಇನ್ನೂ ಮೊದಲಾದವುಗಳನ್ನು ಮಾಡಿದ್ದಾರೆ ಎಂದು ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ.

**ಈ ಅಧ್ಯಯನದಿಂದ ತಿಳಿದು ಬಂದ ಪ್ರಮುಖ ಅಂಶಗಳೆಂದರೆ**

1. ಸ್ವಸಹಾಯ ಸಂಘಗಳನ್ನು ಮಹಿಳೆಯರು ತಮ್ಮ ಸಬಲೀಕರಣದ ಸಾಧನವೆಂದೇ ಭಾವಿಸಿದ್ದಾರೆ.
2. ಸ್ವಸಹಾಯ ಸಂಘಗಳು ಮಹಿಳೆಯರಲ್ಲಿ ಉಳಿತಾಯದ ಮನೋಭಾವನೆಯನ್ನು ಸಾಮೂಹಿಕಗೊಳಿಸಿವೆ.
3. ಸ್ವಸಹಾಯ ಸಂಘದ ಮಹಿಳೆಯರು ಉಳಿತಾಯದೊಂದಿಗೆ ದಿನವಹಿ ರೂ. 50 ರಿಂದ 100 ರವರೆಗೆ ಆದಾಯಗಳಿಸುತ್ತಿದ್ದಾರೆ.
4. ಬಹುತೇಕ ಸ್ವಸಹಾಯ ಸಂಘದ ಮಹಿಳೆಯರು ತಮ್ಮ ಕುಟುಂಬಗಳ ಪ್ರಮುಖ ಗಳಿಕೆದಾರರಾಗಿದ್ದಾರೆ. ಈ ಮೂಲಕ ಸ್ವಸಹಾಯ ಸಂಘ ಮಹಿಳೆಯರಿಗೆ ಉದ್ಯೋಗ ಒದಗಿಸಿ ಬಡತನ ನಿವಾರಣೆಗೆ ಕೊಡುಗೆ ನೀಡುತ್ತಿದೆ.
5. ಸ್ವಸಹಾಯ ಸಂಘದ ಅನಕ್ಷರಸ್ಥ ಮಹಿಳೆಯರು ಸಂಘದ ಸದಸ್ಯರಾದ ನಂತರ ಅಕ್ಷರಸ್ಥರಾಗಿದ್ದಾರೆ. ಇದರಿಂದ ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದಾರೆ.
6. ಸ್ವಸಹಾಯ ಸಂಘದ ಸದಸ್ಯರಾದ ನಂತರ ಮಹಿಳೆಯರು ತಮ್ಮ ಕುಟುಂಬ ಸದಸ್ಯರ ಸಾಲಗಳನ್ನು ಮರುಪಾವತಿ ಮಾಡಿದ್ದಾರೆ.
7. ಮನೆಕಟ್ಟಿಸುವುದು ಮತ್ತು ಮನೆ ರಿಪೇರಿ ಮಾಡುವುದು, ಸಣ್ಣಪುಟ್ಟ ಕೃಷಿ ಜಮೀನು ಖರೀದಿ, ಮಕ್ಕಳ ಮದುವೆ, ಆಹಾರ ಪದಾರ್ಥಗಳ ಖರೀದಿಸುವುದಕ್ಕೆ ಮಹಿಳೆಯರಿಗೆ ಎಸ್.ಹೆಚ್.ಜಿ ಸಹಾಯ ಒದಗಿಸಿದೆ.
8. ತಮ್ಮ ಮತ್ತು ಕುಟುಂಬದ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ತಿಳಿದುಕೊಂಡಿದ್ದಾರೆ.
9. ಸರ್ಕಾರದ ಯೋಜನೆಗಳ ಬಗ್ಗೆ ಅರಿವುಹೊಂದಿದ್ದಾರೆ.
10. ಬ್ಯಾಂಕಿನ ಖಾತೆಯನ್ನು ತೆರೆಯುವುದರೊಂದಿಗೆ ತಮ್ಮ ಬ್ಯಾಂಕಿನ ವ್ಯವಹಾರವನ್ನು ತಾವೇ ನಿರ್ವಹಿಸುವ ಜ್ಞಾನ ಹೊಂದಿದ್ದಾರೆ.
11. ಗ್ರಾಮ ಸಭೆಗಳಲ್ಲಿ ಭಾಗವಹಿಸುವುದು, ಗ್ರಾಮಪಂಚಾಯಿತಿ, ಅಂಚೆಕಛೇರಿಗಳಿಗೆ ಒಬ್ಬರೆ ಭೇಟಿ ನೀಡುವುದನ್ನು ಕಲಿತಿದ್ದಾರೆ.
12. ಸ್ವಸಹಾಯ ಸಂಘದ ಸಭೆಗಳಲ್ಲಿ ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ಮಾರ್ಗ ಕಂಡುಕೊಂಡಿದ್ದಾರೆ.
13. ಹಲವಾರು ಮಹಿಳಾ ಸಂಘಗಳು ಗ್ರಾಮೀಣ ಅರಣ್ಯ ಸಂರಕ್ಷಣೆ ಮತ್ತು ಮದ್ಯಪಾನ ವಿರೋಧಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.
14. ಸಂಘದ ತರಬೇತಿ ಕಾರ್ಯಗಾರಗಳಲ್ಲಿ ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡುವ ಮೂಲಕ ತಮ್ಮ ಅನುಮಾನಗಳಿಗೆ ಗೊಂದಲಗಳಿಗೆ ತಾವೇ ನೇರ ಪರಿಹಾರ ಕಂಡುಕೊಳ್ಳುವುದು ಮತ್ತು ಇತರರೊಂದಿಗೆ ಬೆರೆಯುವಂತಹ ಸಾಮಾಜಿಕ ಮನೋಭಾವನೆಯನ್ನು ಸಹ ರೂಢಿಸಿಕೊಂಡಿದ್ದಾರೆ.

## ಎಸ್.ಹೆಚ್.ಜಿ.ಗಳು ಎದುರಿಸುತ್ತಿರುವ ಸಮಸ್ಯೆಗಳು

1. ಎಸ್.ಹೆಚ್.ಜಿ ಸ್ಥಾಪನೆಯಲ್ಲಿ ಇರುವ ಇಚ್ಛಾಶಕ್ತಿ ಅದನ್ನು ಮುಂದುವರಿಸುವಲ್ಲಿ ಇಲ್ಲದಿರುವುದು ಏಕೆಂದರೆ ಮಹಿಳೆಯರ ಚಂಚಲ ಮನೋಭಾವನೆಯೇ ಮತ್ತು ಕೌಟುಂಬಿಕ ಆಲೋಚನೆಗಳೇ ಹೆಚ್ಚಾಗಿದ್ದು ಸಾಮಾಜಿಕ ಸಂಘಟನಾ ಮನೋಭಾವದ ಕೊರತೆ ಇದಕ್ಕೆ ಕಾರಣವೆನ್ನಬಹುದು.
2. ಇಂದಿಗೂ ಗ್ರಾಮೀಣ ಜನರು ಲೇವಾದೇವಿದಾರರಲ್ಲೇ ಸಾಲಕ್ಕೆ ಮೊರೆ ಹೋಗುವ ಗುಣ ಹೊಂದಿರುವುದು ಏಕೆಂದರೆ ಎಸ್.ಹೆಚ್.ಜಿಯಲ್ಲಿ ಸಾಲ ತೆಗೆದುಕೊಂಡರೆ ಎಲ್ಲರಿಗೂ ನಮ್ಮ ಪರಿಸ್ಥಿತಿ ತಿಳಿಯುವುದೆಂಬ ಅಂಜಿಕೆಯಿಂದ ಎಸ್.ಹೆಚ್.ಜಿಯ ಕಾರ್ಯಚಟುವಟಿಕೆ ವಿಸ್ತಾರವಾಗುತ್ತಿಲ್ಲ.
3. ಪುರುಷರಿಗೆ ಹೋಲಿಸಿದರೆ ಮಹಿಳೆಯರಿಗೆ ದೊರೆಯುವ ವಿರಾಮದ ವೇಳೆಯ ಕೊರತೆ ಮತ್ತು ಸಾಮಾಜಿಕ ಸ್ಥಾನಮಾನದ ಅಸಮಾನತೆಯು ಸಹ ಎಸ್‌ಹೆಚ್‌ಜಿಯು ಪ್ರಬಲವಾಗಿ ಸಂಘಟಿತವಾಗಲು ತೊಡಕಾಗಿದೆ.
4. ಅನಕ್ಷರತೆಯಿಂದ ಮತ್ತು ಸಾಂಪ್ರದಾಯಿಕ ಮನೋಭಾವನೆಯಿಂದಾಗಿ ಇಂದಿಗೂ ಮಹಿಳೆಯರು ಎಸ್. ಹೆಚ್.ಜಿಗಳನ್ನು ಅನುಮಾನದಿಂದಲೇ ನೋಡುತ್ತಿದ್ದಾರೆ.

ಇಡೀ ಸಮುದಾಯ ಅಭಿವೃದ್ಧಿಯಾಗಬೇಕಾದರೆ ಆ ಸಮುದಾಯದ ಭಾಗವಾದ ಮಹಿಳೆಯು ಅಭಿವೃದ್ಧಿಯಾದಾಗ ಮಾತ್ರ ಇದು ಸಾಧ್ಯ. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಶಿಕ್ಷಣ, ತರಬೇತಿ ಮತ್ತು ಅವಕಾಶಗಳನ್ನು ಒದಗಿಸಿ ಆಕೆಯ ಸಂಪೂರ್ಣ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಾಗ ಮತ್ತು ಆಕೆಯ ಶ್ರಮ ಮತ್ತು ಕೌಶಲ್ಯವನ್ನು ಬಳಸಿಕೊಂಡಾಗ ಮಾತ್ರ ಸಮಾಜದ ಏಳಿಗೆ ಸಾಧ್ಯ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಆಗಬೇಕಾದ ಪ್ರಮುಖ ಬದಲಾವಣೆಗಳೆಂದರೆ

1. ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡುವುದು
2. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಒದಗಿಸುವುದು
3. ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯಾಗುವಂತಹ ನಿಟ್ಟಿನಲ್ಲಿ ಯೋಜನೆಗಳನ್ನು ಸಮರ್ಥವಾಗಿ ಜಾರಿಗೊಳಿಸುವುದು
4. ಉದ್ಯೋಗದಲ್ಲಿ ಅವಕಾಶದೊಂದಿಗೆ ಪುರುಷ ಸಮಾನ ವೇತನವನ್ನು ಎಲ್ಲ ರಂಗದಲ್ಲೂ ಕಡ್ಡಾಯಗೊಳಿಸುವುದು
5. ಮಹಿಳಾ ಸಂಬಂಧಿ ಕಾನೂನುಗಳನ್ನು ಸಮರ್ಥವಾಗಿ ಜಾರಿಗೊಳಿಸುವಂತಹ ಅಧಿಕಾರಿ ವರ್ಗ ಮತ್ತು ಆಡಳಿತ ವರ್ಗವನ್ನು ಮಾನಸಿಕವಾಗಿ ತಯಾರು ಮಾಡುವುದು.
6. ಮಹಿಳೆಯರಿಗೆ ಸ್ವ-ಉದ್ಯೋಗ, ಸಾಲ, ತಂತ್ರಜ್ಞಾನ ಮತ್ತು ಮಾರುಕಟ್ಟೆ ಸೌಲಭ್ಯದೊಂದಿಗೆ ಮೂಲಭೂತ ಅವಶ್ಯಕತೆಗಳನ್ನು ಉಚಿತವಾಗಿ ಒದಗಿಸುವುದು
7. ಮಹಿಳೆಯ ವಿರುದ್ಧದ ಅಪರಾಧಗಳನ್ನು ಉಗ್ರವಾಗಿ ಶಿಕ್ಷಿಸುವಂತಹ ಕಾನೂನುಗಳನ್ನು ಜಾರಿಗೊಳಿಸುವುದು ಮಾತ್ರವಲ್ಲದೆ ಅಂತಹ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಕ್ರಮಕೈಗೊಳ್ಳುವುದು.

**ಉಪಸಂಹಾರ:**

ಕ್ಷೇತ್ರಾಧ್ಯಯನಕ್ಕೆ ಒಳಪಟ್ಟ 300 ಪ್ರತಿವರ್ತಿಗಳಿಂದ ಬಂದಂತಹ ದತ್ತಾಂಶಗಳ ಪ್ರಕಾರ ಸ್ವಸಹಾಯ ಸಂಘದ ಸದಸ್ಯತ್ವವನ್ನು ಪಡೆದ ನಂತರ ಮಹಿಳೆಯರಿಗೆ ಬ್ಯಾಂಕಿನ ವ್ಯವಹಾರಗಳು ತಿಳಿಯುತ್ತಿವೆ. ಕುಟುಂಬದ ಹೊರಗೆ ಸಾಮಾಜಿಕ ಸಂವಹನದ ಕಲೆಯನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ. ಸಾಲದ ಹಣದಿಂದ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗುತ್ತಿರುವುದನ್ನು ಕಾಣಬಹುದು. ಕುಟುಂಬದ ಒಳಗೆ ಮತ್ತು ಕುಟುಂಬದ ಹೊರಗೆ ತೀರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುವುದರ ಜತೆಗೆ ಗ್ರಾಮೀಣಾಭಿವೃದ್ಧಿ

ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು ಒಟ್ಟಿನಲ್ಲಿ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಮತ್ತು ರಾಜಕೀಯ ಸಬಲೀಕರಣದ ಅಂಶಗಳನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು:**

1. ಎನ್.ಸೇತುರಾಮ್: ಮಹಾತ್ಮ ಗಾಂಧಿಯವರ ಮನೋರಂಗ– ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ–2011
2. ನೀಲತ್ತಹಳ್ಳಿ ಕಸ್ತೂರಿ ;ಗಾಂಧೀಜಿ ಮತ್ತು ಗ್ರಾಮೀಣ ಭಾರತ– ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು–2006
3. ಆದಿತ್ಯಕುಮಾರ್ : 2009 “ಸ್ವ ಸಹಾಯ ಸಂಘಗಳು ಮತ್ತು ಕಿರು–ಹಣಕಾಸು ಗ್ರಾಮೀಣಾಭಿವೃದ್ಧಿಗೆ ಒಂದು ಸಮಗ್ರೀಕರಣ:”–ಮಿತ್ತಲ್ ಪಬ್ಲಿಕೇಷನ್ಸ್, ನವದೆಹಲಿ
4. ಲಕ್ಷ್ಮೀಶ ಎ. ಎಸ್. ಮತ್ತು ಶ್ಯಾಂಸುಂದರ್ (2009) “ಕಿರು ಹಣಕಾಸು ಮತ್ತು ಕರ್ನಾಟಕದಲ್ಲಿ ಸ್ವ–ಸಹಾಯ ಸಂಘಗಳು” ಮಿತ್ತಲ್ ಪಬ್ಲಿಕೇಷನ್ಸ್, ನವದೆಹಲಿ
5. ಹನುಮಂತರಾಯ ಎಸ್.ಆರ್. ಮತ್ತು ಅಶೋಕ ಕೆ.ವಿ. (2013 “ಸ್ವ–ಸಹಾಯ ಸಂಘಗಳ ಮೂಲಕ ಹಣಕಾಸಿನ ಒಳಗೊಳ್ಳುವಿಕೆ ಮತ್ತು ಕರ್ನಾಟಕದಲ್ಲಿ ಮಹಿಳಾ ಆರ್ಥಿಕ ಸಬಲೀಕರಣ:” ಪ್ರಸಾರಾಂಗ–ತುಮಕೂರು ವಿಶ್ವವಿದ್ಯಾಲಯ, ತುಮಕೂರು. ಪು.ಪು. 64–69.
6. ಶಿವಾನಂದನಾರಿ (2013) “ಸ್ವ–ಸಹಾಯ ಗುಂಪು ಬ್ಯಾಂಕು ಸಂಪರ್ಕ ಮಾದರಿ ಮತ್ತು ಹಣಕಾಸಿನ ಒಳಗೊಳ್ಳುವಿಕೆ.– ಒಂದು ಅಧ್ಯಯನ” ಪ್ರಸಾರಾಂಗ – ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಪು.ಪು.116–130.
7. ಕ.ಬೈರಪ್ಪ ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ
8. ವೆಂಕಟರಾವ್. ವಿ ಮತ್ತು ಹಜಾರಿಕ್ ಎನ್. (1980) ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್ ಇಂಡಿಯಾ, ಚಾಂದ್ ಅಂಡ್ ಕೋ ಪಬ್ಲಿಕೇಷನ್ ನ್ಯೂಡೆಲ್ಲಿ
9. ಶ್ರೀಧರ್ ಎ (2002) ವಿಕೇಂದ್ರೀಕರಣ ಮತ್ತು ಗ್ರಾಮ ಪಂಚಾಯಿತಿ, ಪ್ರಸಾರಾಂಗ , ಕನ್ನಡ ವಿ.ವಿ.ಹಂಪಿ
10. ಮೋಹನದಾಸ್ ಕರಮಚಂದ್ ಗಾಂಧಿ (ಮೂಲ) ನನ್ನ ಆದರ್ಶ ಗ್ರಾಮ (ಸಂ)ಡಾ.ಹೋ.ನ ಶ್ರೀನಿವಾಸಯ್ಯ, ಗಾಂಧಿ ಭವನ, ಬೆಂಗಳೂರು
11. ಮೊ.ಕ.ಗಾಂಧಿ–ಪಂಚಾಯತ್ ರಾಜ್ 2006 ನವಜೀವನ ಮುದ್ರಣಾಲಯ ಅಹ್ಮದಾಬಾದ್

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.